

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಒಂಟೆಗಳ ಮದುವೆಯಲ್ಲಿ ಕತ್ತೆಗಳ ಸಂಗೀತ!

ನಮ್ಮ ದೇಶದಲ್ಲಿ ನಡೆಯುವಷ್ಟು ಸಭೆ-ಸಮಾರಂಭಗಳು ಬೇರಾವ ದೇಶಗಳಲ್ಲಿಯೂ ನಡೆಯುವುದಿಲ್ಲ. ಹಳ್ಳಿಯ ಒಂದು ನಲ್ಲಿ ಉದ್ಘಾಟನೆಯಿಂದ ಹಿಡಿದು ದಿಲ್ಲಿಯ ಅಖಿಲ ಭಾರತ ಸಮ್ಮೇಳನದವರೆಗೆ ನಡೆಯುವ ಸಭೆ-ಸಮಾರಂಭಗಳಿಗೆ ಎಷ್ಟೊಂದು ಹಣ ಹಾಗೂ ಸಮಯ ವ್ಯಯವಾಗುತ್ತದೆ ದೇವರೇ ಬಲ್ಲ. ರಾಜಕೀಯ ಧುರೀಣರು ತಮ್ಮ ಆಪ್ತ ಸ್ನೇಹಿತರ ಮಗಳ ಮದುವೆಯಲ್ಲಿ ಭಾಗವಹಿಸಲು ಅನುಕೂಲವಾಗಲೆಂದೇ ಆ ಸ್ಥಳ, ತಾಲ್ಲೂಕ್ ಅಥವಾ ಜಿಲ್ಲೆಯಲ್ಲಿ ನೆಪಮಾತ್ರಕ್ಕೆ ಯಾವುದೋ ಸರ್ಕಾರಿ ಯೋಜನೆಯ ಮೀಟಿಂಗ್ ಹಾಕಿಕೊಂಡು ಬಂದಿರುತ್ತಾರೆ. ಆಪ್ತರ ಸ್ನೇಹವೂ ಉಳಿಯಬೇಕು, ಸರ್ಕಾರದ ಖರ್ಚಿನಲ್ಲಿ ಪ್ರಯಾಣವೂ ಆಗಬೇಕು. ಅವರ ಈ ಜಾಣ್ಮೆಯನ್ನು ನೋಡಿದರೆ ಸಂಸ್ಕೃತದ ಈ ಮುಂದಿನ ಸೂಕ್ತಿ ನೆನಪಾಗುತ್ತದೆ: "ಆಮ್ರಾಶ್ಚ ಸಿಕ್ತಾಃ ಪಿತರಶ್ಚ ತೃಪ್ತಾಃ". ಅಂದರೆ ಮಾವಿನ ಮರದ ಕೆಳಗೆ ನಿಂತು ತರ್ಪಣ ಕೊಟ್ಟರೆ ಮಾವಿನ ಮರಗಳಿಗೂ ನೀರು ಎರೆದಂತಾಯಿತು, ಪರಲೋಕದಲ್ಲಿರುವ ಪಿತೃಗಳಿಗೂ ಸಂತೃಪ್ತಿಯಾಯಿತು!

ಜವಾಬ್ದಾರಿ ಕೆಲಸಗಳನ್ನು ನಿರ್ವಹಿಸಬೇಕಾದ ಪ್ರತಿಷ್ಠಿತ ವ್ಯಕ್ತಿಗಳ ಬಹುಪಾಲು ಸಮಯ ಇಂತಹ ಖಾಸಗಿ ಸಮಾರಂಭಗಳಲ್ಲಿ ಭಾಗವಹಿಸುವುದರಲ್ಲಿ ವ್ಯರ್ಥವಾಗಿ ಹೋಗುತ್ತದೆ. ವೃತ್ತಿ ತೆರಿಗೆ, ಆದಾಯ ತೆರಿಗೆ, ಆಸ್ತಿ ತೆರಿಗೆ ಇತ್ಯಾದಿ ತೆರಿಗೆಗಳಂತೆ ಈ ಎಲ್ಲ ಸಭೆ-ಸಮಾರಂಭಗಳಿಗೆ 'ಭಾಷಣ ತೆರಿಗೆ' ಎಂಬ ಹೊಸ ತೆರಿಗೆಯನ್ನು ವಿಧಿಸಿದರೆ ಅದೆಷ್ಟೋ ಪಂಚವಾರ್ಷಿಕ ಯೋಜನೆಗಳಿಗೆ ಬೇಕಾಗುವಷ್ಟು ಹಣ ಸಂಗ್ರಹವಾಗುವುದರಲ್ಲಿ ಅನುಮಾನವಿಲ್ಲ. ಅದರಲ್ಲೂ ಉದ್ದುದ್ದ ಭಾಷಣ ಮಾಡುವ ನಮ್ಮ ಸ್ವಾಮಿಗಳಿಗೂ ಮತ್ತು ರಾಜಕಾರಣಿಗಳಿಗೂ ವಿಶೇಷ 'ಭಾಷಣ ತೆರಿಗೆ' ಹಾಕಿದರೆ ಯಥೇಚ್ಛವಾಗಿ ಸಂಗ್ರಹವಾಗುವುದರಲ್ಲಿ ಸಂದೇಹವಿಲ್ಲ. ಇಬ್ಬರೂ ಒಂದಾಗಿ ತೆರಿಗೆ ವಿನಾಯಿತಿ ಪಡೆದರೆ ಆ ಮಾತು ಬೇರೆ! ಈ ಮಾತನ್ನು ನಮ್ಮನ್ನೂ ಒಳಗೊಂಡಂತೆ ಹೇಳುತ್ತಿರುವುದರಿಂದ ಮರೆಯಲ್ಲಿ ಟೀಕಿಸುವುದು ಬೇಕಿಲ್ಲ. ಅದೆಷ್ಟೋ ರಾಜಕೀಯ ಮುಖಂಡರಿಗೆ ನಿದ್ರೆ ಮಾಡಲು ಸಮಯ ಸಿಗದೆ ಸಮಾರಂಭಗಳಲ್ಲಿಯೇ 'ಸುಖನಿದ್ರೆ' ಮಾಡುವುದನ್ನು ನೀವು ನೋಡಿರಬಹುದು! (ಛಾಯಾಚಿತ್ರಗ್ರಾಹಕರು ಇಂತಹ ಅಪರೂಪದ ದೃಶ್ಯಗಳನ್ನು ಸೆರೆಹಿಡಿಯಲು ತುದಿಗಾಲ ಮೇಲೆ ನಿಂತಿರುತ್ತಾರೆ). ಅವರನ್ನು ನಿದ್ದೆಗೆಡಿಸುವ ಸಭೆಗಳೇ ಬೇರೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಅದಕ್ಕಾಗಿಯೇ ಏನೋ ದಣಿದು ಬಂದ ಆ ಅತಿಥಿಗಳ ಮೇಲಿನ 'ಪ್ರೀತಿ'ಯಿಂದ ಸಮಾರಂಭದ ಸಂಘಟಕರು ತಂಗಾಳಿ ಬೀಸಲು ದೊಡ್ಡ ದೊಡ್ಡ ಫ್ಯಾನ್ ತಂದಿಡುತ್ತಾರೆ. ಅವುಗಳ ಆರ್ಭಟದಲ್ಲಿ ಅತಿಥಿಗಳು ಗೊರಕೆ ಹೊಡೆಯುವುದು ಸದ್ಯ ಕೇಳಿಸುವುದಿಲ್ಲ. ಎಷ್ಟೇ ಆಗಲಿ ಈ ನಾಡು 'ಅತಿಥಿದೇವೋ ಭವ' ಎಂದು ನಂಬಿದ ನಾಡಲ್ಲವೇ!

ಸಭೆಗೆ ಬಂದ ಅತಿಥಿಗಳನ್ನು ಸ್ವಾಗತಿಸುವಾಗ 'ನಮ್ಮ ಮೇಲೆ ವಿಶ್ವಾಸವಿಟ್ಟು ತಮ್ಮೆಲ್ಲ ಕೆಲಸಕಾರ್ಯಗಳನ್ನು ಬದಿಗೊತ್ತಿ' ಬಂದಿದ್ದಾರೆಂದು ಹೇಳುವುದು ವಾಡಿಕೆ. ಇದು ಸಮಾರಂಭದ ಸಂಘಟಕರ ದೊಡ್ಡಸ್ತಿಕೆಯೋ, ಅತಿಥಿಗಳು ತಮ್ಮ ಕರ್ತವ್ಯಗಳ ಬಗ್ಗೆ ತೋರುವ ನಿರ್ಲಕ್ಷ್ಯವೋ, ಸಂಘಟಕರ ಮೇಲೆ ಅತಿಥಿಗಳಿಗಿರುವ ದಾಕ್ಷಿಣ್ಯವೋ ಅಥವಾ ಈ ಮೂರೂ ಸೇರಿ ಈ ದೇಶದ ದುರ್ದೈವವೋ ಆ ದೇವರಿಗೇ ಗೊತ್ತು! ವೇದಿಕೆಯ ಮೇಲೆ ಅತಿಥಿಗಳ ಜೊತೆಗೆ ಸಮಾರಂಭದ ಸಂಘಟಕರು ಯಾರು ಎಲ್ಲಿ ಕುಳಿತುಕೊಳ್ಳಬೇಕೆಂಬ ವಿಚಾರದಲ್ಲಿ ತೆರೆಮರೆಯಲ್ಲಿ ಸಾಕಷ್ಟು ತಿಕ್ಕಾಟಗಳು ನಡೆದು ಮುನಿಸಿಕೊಂಡಿರುವ ಮುಖಗಳು ಕಾಣಿಸುತ್ತವೆ. ಕೆಲವು ಕಡೆ ಸ್ವಾಗತ ಮತ್ತು ವಂದನಾರ್ಪಣೆಯನ್ನು ಯಾರು ಮಾಡಬೇಕೆಂಬ ಬಗ್ಗೆ ದೊಡ್ಡ ವಿವಾದವೇ ಹುಟ್ಟಿ ರಾಜಿಯಾಗಿರುತ್ತದೆ. ಸ್ವಾಗತ ಮಾಡಬೇಕಾದವನು ಬರೀ ಸ್ವಾಗತವನ್ನಷ್ಟೇ ಮಾಡುವುದಿಲ್ಲ. ಒಂದು ದೊಡ್ಡ ಭಾಷಣವನ್ನೇ ಬಿಗಿಯುತ್ತಾನೆ. ಅದಕ್ಕೇ ಏನೋ ಕಾರ್ಯಕ್ರಮದ ಪಟ್ಟಿಯಲ್ಲಿ 'ಸ್ವಾಗತ' ಎಂಬುದರ ಬದಲು 'ಸ್ವಾಗತ ಭಾಷಣ' ಎಂದು ಇರುತ್ತದೆ. ಆ ಸ್ವಾಗತ ಭಾಷಣಕಾರನ 'ಹೃದಯವೈಶಾಲ್ಯ' ಎಷ್ಟು ದೊಡ್ಡದಾಗಿರುತ್ತದೆಯೆಂದರೆ ಸಕಾಲದಲ್ಲಿ ಸಭೆಗೆ ಬಂದು ವೇದಿಕೆಯ ಮೇಲೆ ಕುಳಿತವರನ್ನು ಅವನು ಕಣ್ಣೆತ್ತಿಯೂ ಸಹ ನೋಡದೆ ಸಭೆಗೆ ಬರದೇ ಇರುವವರನ್ನೇ ಮೊದಲು ಸ್ವಾಗತಿಸುತ್ತಾನೆ. 'ಅನಿವಾರ್ಯ ಕಾರಣಗಳಿಂದ' ಬರದ ಆ ಪ್ರತಿಷ್ಠಿತರನ್ನು ಸ್ವಾಗತಿಸುವ 'ಅನಿವಾರ್ಯತೆ' ಏನಿರುತ್ತದೆಯೋ ಅವನಿಗೇ ಗೊತ್ತು! ಸಭೆಗೆ ಬರದೇ ಇರುವವರನ್ನು ಸ್ವಾಗತಿಸುವ 'ಶಿಷ್ಟಾಚಾರ' ನಮ್ಮ ದೇಶದಲ್ಲಲ್ಲದೆ ಬೇರಾವ ದೇಶದಲ್ಲೂ ಇಲ್ಲ. ನಂತರ ಸರದಿಯ ಮೇಲೆ ಗಂಟೆಗಟ್ಟಲೆ ಕುಟ್ಟುವ ಅತಿಥಿಗಳ ಭಾಷಣ ನಿಮ್ಮನ್ನು ನಜ್ಜುಗುಜ್ಜಾಗಿ ಮಾಡುತ್ತದೆ. ಮೊನ್ನೆ ಮೊನ್ನೆ ಮಂಡಲ ಪಂಚಾಯಿತಿ ಅಧ್ಯಕ್ಷೆಯಾಗಿ ವ್ಯಾನಿಟಿ ಬ್ಯಾಗ್ ಹಿಡಿಯಲು ಕಲಿತ ಶ್ರೀಮತಿ ಹನುಮಕ್ಕನ ಅಧ್ಯಕ್ಷ ಭಾಷಣವಂತೂ 'ಉದ್ಬೋಧಕ' ಮತ್ತು ಮಹಿಳಾಸ್ವಾತಂತ್ರ್ಯದ ಪ್ರತೀಕ. ಪ್ರತಿಯೊಬ್ಬರೂ ತಮ್ಮ ಭಾಷಣದ ಆರಂಭದಲ್ಲಿ ಆಹ್ವಾನಪತ್ರಿಕೆಯನ್ನು ನೋಡಿ, ಸುತ್ತ ಕಣ್ಣರಳಿಸಿ ವೇದಿಕೆಯ ಮೇಲೆ ಮತ್ತು ಕೆಳಗೆ ಕುಳಿತ 'ಮಹಾನುಭಾವ'ರ ಹೆಸರನ್ನು ಹೇಳುವುದು ರೂಢಿಗತವಾಗಿ ಬಂದಿರುವ ಸಂಪ್ರದಾಯ. ಅದು ಅವರ ಮೇಲಿನ ಗೌರವದಿಂದಲೋ ಅಥವಾ ಅವರ ಹೆಸರನ್ನು ಹೇಳದೇ ಇದ್ದರೆ ಎಲ್ಲಿ ಸಿಟ್ಟಾಗುತ್ತಾರೆಂಬ ಭಯದಿಂದಲೋ ಅವರವರ ಸಂಬಂಧ, ಸಂದರ್ಭಗಳನ್ನು ಗಮನದಲ್ಲಿರಿಸಿಕೊಂಡು 'ಅನುಭವಿ'ಗಳು ತೀರ್ಮಾನಿಸಬೇಕಾದ ಸಂಗತಿ. ಕೆಲವೊಮ್ಮೆ ತೂಕಡಿಸುವ ಅತಿಥಿಗಳನ್ನು ನಿದ್ರೆಯಿಂದ ಎಚ್ಚರಿಸಲು ಅದು ಸಹಾಯಕವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಎಲ್ಲಾ ಅತಿಥಿಗಳು ಮತ್ತು

ಸಮಾರಂಭದ ಸಂಘಟಕರು 'ಅವರೇ, ಇವರೇ' ಎಂದು ಹೇಳಲು ಬಳಸಿಕೊಳ್ಳುವ ಸಮಯವನ್ನು ಒಟ್ಟುಗೂಡಿಸಿದರೆ ಸಮಾರಂಭದ ಅರ್ಧ ಸಮಯ ಅದರಲ್ಲೇ ಹೋಗಿರುತ್ತದೆ! ಇನ್ನು ಅತಿಥಿಗಳ ಭಾಷಣದ ಮೂಲ 'ಕಥಾವಸ್ತು' ಅಥವಾ 'ಗೇಯ' ಅವರನ್ನು ಆಹ್ವಾನಿಸಿದ ಸಮಾರಂಭದ ಮೂಲಕರ್ತೃಗಳ ಗುಣಗಾನ! ಇಬ್ಬರೂ ತಮ್ಮ ತಮ್ಮ ಭಾಷಣಗಳಲ್ಲಿ ಪರಸ್ಪರ ಪ್ರಶಂಸೆಯ ಮಾತುಗಳನ್ನಾಡುತ್ತಾರೆ. ಸಮಾರಂಭದುದ್ದಕ್ಕೂ ಇಂತಹ ಹೊಗಳಿಕೆಯ ಮಾತುಗಳನ್ನು ಕೇಳಿದಾಗ ನಮಗೆ ಸಂಸ್ಕೃತದ ಈ ಕೆಳಗಿನ ಸುಭಾಷಿತ ನೆನಪಾಗುತ್ತದೆ:

> **ಉಷ್ಟ್ರಾಣಾಂ ಚ ವಿವಾಹೇಷು ಗೀತಂ ಗಾಯಂತಿ ಗಾರ್ದಭಾಃ ।**
> **ಪರಸ್ಪರಂ ಪ್ರಶಂಸಂತಿ 'ಅಹೋ ರೂಪಂ ಅಹೋ ಧ್ವನಿಃ' ॥**

ಇದರ ಕನ್ನಡ ಭಾವಾನುವಾದ:

> **ಒಂಟೆಗಳ ಮದುವೆಯಲ್ಲಿ ಕತ್ತೆಗಳ ಸಂಗೀತ!**
> **'ಎಂತಹ ಚೆಲುವೆ' ನೀನೆಂದು ಕತ್ತೆ ಹೊಗಳಿದರೆ**
> **'ಎಂತಹ ಮಧುರಕಂಠ' ನಿನ್ನದೆಂದು ಒಂಟೆ ಹೊಗಳುತ್ತದೆ!**

ನಮ್ಮ ದೇಶದ ಬಹುತೇಕ ಸಮಾರಂಭಗಳಲ್ಲಿ ವೇದಿಕೆಯ ಮೇಲಿಂದ ಕೇಳಿಬರುವ ಮಾತುಗಳು ಇದಕ್ಕೆ ಹೊರತಾಗಿಲ್ಲ. ಈ ಒಂಟೆ ಮತ್ತು ಕತ್ತೆಗಳು ಒಂದೊಂದೇ ವೇದಿಕೆಯಿಂದ ನಿರ್ಗಮಿಸುವ 'ರಾಸಭ ಲೀಲೆ'ಯಲ್ಲಿ ಕೊನೆಗೆ ಹೇಸರಗತ್ತೆಗಳಾಗುವವರು ಸಭಿಕರು! ಅನೇಕ ಸಭೆ-ಸಮಾರಂಭಗಳಿಗೆ ನಿರ್ದಿಷ್ಟವಾದ, ಮೌಲ್ಯಭರಿತವಾದ ಗುರಿ ಇಲ್ಲದೆ ವ್ಯಕ್ತಿಗತ ಪ್ರತಿಷ್ಠೆಗಳನ್ನು ಮೆರೆಯುವ ಮಾಧ್ಯಮಗಳಾಗಿರುತ್ತವೆ. ಇನ್ನು ರಾಜಕೀಯ ಸಭೆಗಳನ್ನು ಆಯೋಜಿಸಲು ಧಾರಾಳವಾಗಿ ಮಾಡುವ ಖರ್ಚು ಅವುಗಳನ್ನು ಸಂಘಟಿಸಿದ ಜನರು ತಮ್ಮ ರಾಜಕೀಯ ಭವಿಷ್ಯಕ್ಕಾಗಿ ಮಾಡಿದ ಬಂಡವಾಳ ಹೂಡಿಕೆ ಎಂದರೆ ಅತಿಶಯೋಕ್ತಿಯಾಗಲಾರದು.

ಇನ್ನು ಸಮಾರಂಭದ ನಿರೂಪಕ ಪ್ರತಿಯೊಬ್ಬರ ಭಾಷಣ ಮುಗಿದ ಮೇಲೆ ಅವರ ಭಾಷಣವನ್ನು epitomize ಮಾಡಿ ಸಭಿಕರಿಗೆ ತಿಳಿಸಿಕೊಡುವ ಪರಿಯಂತೂ ಅವನು ಯಾವುದೋ ಶಾಲಾಕಾಲೇಜಿನ ಅಧ್ಯಾಪಕನಲ್ಲದೆ ಬೇರೆ ಇರಲು ಸಾಧ್ಯವಿಲ್ಲ ಎಂದು ದೃಢಪಡಿಸುತ್ತದೆ. ಅವನ ಮಾತಿನ ಧಾಟಿ ಸಭಿಕರನ್ನು ವಿದ್ಯಾರ್ಥಿಗಳೆಂದು ತಿಳಿದುಕೊಂಡ ರೀತಿಯಲ್ಲಿರುತ್ತದೆ. ಮಾತಿನ ಮಧ್ಯೆ ರಂಜನೀಯವಾದ ಒಂದೆರಡು ಚಿನಕುರಳಿಗಳನ್ನು ಹೇಳಿ ಅವನು ಪ್ರತಿಯೊಬ್ಬ ಅತಿಥಿಗಳ ಭಾಷಣದ ಸಾರಸಂಗ್ರಹದ ನಿರೂಪಣೆಗೆ ತೆಗೆದುಕೊಳ್ಳುವ ಒಟ್ಟು ಸಮಯ ತರಗತಿಯ ಒಂದು ಗಂಟೆಗೆ ಕಡಿಮೆ ಏನೂ ಇರುವುದಿಲ್ಲ. ಇವರೆಲ್ಲರ ಭಾಷಣ ಮುಗಿದು ಕೊನೆಯಲ್ಲಿ ಸಾಹಿತಿಗಳ ಕೆಂಗಣ್ಣಿಗೆ ಗುರಿಯಾದ ಸ್ವಾಮಿಗಳ 'ಸಾನ್ನಿಧ್ಯ'ದ ಸರದಿ ಬರುವ ವೇಳೆಗೆ ಇಡೀ ಸಭೆ ತಲೆಸುತ್ತು ಬಂದು ಕಣ್‌ಕಣ್‌ಬಿಡುವ ಸಕ್ಕರೆರೋಗಿಯಂತಾಗಿರುತ್ತದೆ. ಸ್ವಾಮಿಗಳು ಪೂರ್ಣಕುಂಭಸ್ವಾಗತವಿಲ್ಲದೆ ವೇದಘೋಷಗಳ ಅಬ್ಬರವಿಲ್ಲದೆ ಬಿರುದುಬಾವಲಿಗಳಿಲ್ಲದೆ ಸಕಾಲದಲ್ಲಿ ಸಭೆಗೆ ಬಂದು ಕುಳಿತಿದ್ದರೂ ಅದ್ದೂರಿ ಮೆರವಣಿಗೆಯಲ್ಲಿ ತಡವಾಗಿ ಬಿಜಯಂಗೈಸುವ ಸಭಾಧ್ಯಕ್ಷರ ವಿರುದ್ಧ ಮಾತನಾಡಬಾರದೆಂಬ ಕಟ್ಟಪ್ಪಣೆ ಬೇರೆ. 'ಕಾಲಾಯ ತಸ್ಮೈ ನಮಃ!'

ಇನ್ನು ಉತ್ತರಕರ್ನಾಟಕದ ಸಭೆ-ಸಮಾರಂಭಗಳ ವಿಶೇಷತೆ ಎಂದರೆ ಸಭೆಯ ಆರಂಭದಲ್ಲಿ ಸ್ವಾಗತಭಾಷಣವಾದ ನಂತರ ಅತಿಥಿಗಳಿಗೆ ಮಾಡುವ 'ಮಾಲಾರ್ಪಣೆ'. ಇದು ಅಂದಿನ ಕಾರ್ಯಕ್ರಮದ ಅಜೆಂಡಾದಲ್ಲಿ ಅತ್ಯಂತ ಪ್ರಮುಖವಾದುದು. ಮುಖ್ಯ ಅತಿಥಿಗಳ ಹೆಸರಿನ ಜೊತೆಗೆ ಮಾಲಾರ್ಪಣೆ ಮಾಡುವ ಕಾರ್ಯಕರ್ತರ ಹೆಸರು ವಿಜೃಂಭಿಸುತ್ತದೆ. ಆ ಕಾರ್ಯಕರ್ತರ ಹೆಸರನ್ನು ಕೂಗಿ ಕರೆದಾಗ ಸಭೆಯಿಂದ ಎದ್ದು ಬರುವ ಅವರ ಗತ್ತು ಗಮ್ಮತ್ತುಗಳು ನೋಡುವಂತಿರುತ್ತವೆ. ಅತಿಥಿಗಳೊಂದಿಗಿರುವ ಅವರ ಸಂಬಂಧ ಮತ್ತು ದಘೂತಿಗನುಗುಣವಾಗಿಯೇ ಅವರ ಆಯ್ಕೆಯಾಗಿರುತ್ತದೆ. ಮಾಲಾರ್ಪಣೆಗಾಗಿ ಮಾಡುವ ಈ ಆಯ್ಕೆ ರಾಜ್ಯಪ್ರಶಸ್ತಿಗೆ ಸರ್ಕಾರ ಮಾಡುವ ಆಯ್ಕೆಗಿಂತ ಕಷ್ಟಕರ. ಈ ಮಾಲಾರ್ಪಣೆಯು, ಇತ್ತೀಚೆಗೆ ವಾದವಿವಾದಗಳಿಗೆ ಎಡೆಮಾಡಿಕೊಟ್ಟ 'ಚಪ್ಪಲಿ' ಪ್ರಕರಣದಲ್ಲಿ ಸ್ವಾಮಿಗಳೋರ್ವರ ಆಶಯದಂತೆ ಇನ್ನು ಮುಂದೆ ಚಪ್ಪಲಿಹಾರಾರ್ಪಣೆಯಾಗಿ ಪರಿವರ್ತನೆಗೊಂಡರೆ ಅತಿಥಿಗಳ ಭಾಷಣ ಕಡಿಮೆಯಾಗಬಹುದೇನೋ!

ಸಭೆಯ ಕೊನೆಯಲ್ಲಿ ವಂದನಾರ್ಪಣೆ ಮಾಡುವ ಮಹಾಶಯನೋ ಸ್ವಾಗತಭಾಷಣಕಾರನ ಅಪರಾವತಾರ. ಆತನ 'ಜವಾಬ್ದಾರಿ' ಬಹಳ ಹೆಚ್ಚಿನದು ಮತ್ತು ಕ್ಲಿಷ್ಟಕರವಾದುದು. ಸಭಿಕರು ಧೂಳು ಕೊಡವಿ ಎದ್ದೆದ್ದು ಹೋಗುತ್ತಿದ್ದರೂ ಮೈಕ್‌ಸೆಟ್, ಶಾಮಿಯಾನ, ಕುರ್ಚಿ, ಟೇಬಲ್ ಒದಗಿಸಿದವರಿಗೆಲ್ಲಾ ಧನ್ಯವಾದ ಹೇಳದೇ ಇದ್ದರೆ 'ಕರ್ತವ್ಯಚ್ಯುತಿ'ಯಾದೀತೆಂಬ ಭಯ ಅವನಿಗೆ! ಇಂತಹ ಕರ್ತವ್ಯಚ್ಯುತಿ ಆಗಬಾರದೆಂಬ ಉದ್ದೇಶದಿಂದ ಕೆಲವರು ಅಧ್ಯಕ್ಷರ ಭಾಷಣಕ್ಕಿಂತ ಅಥವಾ ಸ್ವಾಮಿಗಳ ಆಶೀರ್ವಚನಕ್ಕಿಂತ ಮೊದಲೇ ಎಲ್ಲರಿಗೂ ವಂದನಾರ್ಪಣೆ ಮಾಡಿ 'ಕೃತಾರ್ಥ'ರಾಗುತ್ತಾರೆ. ಅಧ್ಯಕ್ಷರ ಅಥವಾ ಸ್ವಾಮಿಗಳ ಭಾಷಣಕ್ಕಿಂತ ಮೊದಲು ಸಭಿಕರು ಹೋಗುವುದಿಲ್ಲವೆಂಬ ಇವರ ವ್ಯಾವಹಾರಿಕ ಜಾಣ್ಮೆಗೆ ಮೆಚ್ಚಬೇಕು.

ಕರ್ನಾಟಕದಲ್ಲಿ ನಡೆಯುವ ಸಭೆ-ಸಮಾರಂಭಗಳು ಇತ್ತೀಚೆಗೆ ಹೊಸಹೊಸ ಆವಿಷ್ಕಾರಗಳನ್ನು ಪಡೆದಿವೆ. ಸಭೆಯಲ್ಲಿ ಸನ್ಮಾನ ಪಡೆಯುವವರು ಈ ಮೊದಲು ವೇದಿಕೆಯ ಮೇಲೆ ಸನ್ಮಾನ ಮಾಡುವ ಗಣ್ಯವ್ಯಕ್ತಿಗಳ ಹತ್ತಿರವೇ ಹೋಗಿ ಶಾಲು, ಹಾರ-ತುರಾಯಿ ಪಡೆಯುತ್ತಿದ್ದರು. ಈಗ ಸಮಾರಂಭದ ಕಾರ್ಯಕಲಾಪಗಳನ್ನು ನಿರೂಪಣೆ ಮಾಡುವವರು ಇಂಥವರಿಗೆ ಸನ್ಮಾನ ಎಂದು ಘೋಷಿಸಿದ ತಕ್ಷಣವೇ ಸಂಘಟಕರು ಎಲ್ಲಿಂದಲೋ ಒಂದು ಕುರ್ಚಿಯನ್ನು ಹೊತ್ತುತಂದು ವೇದಿಕೆಯ ಮುಂಭಾಗದಲ್ಲಿಟ್ಟು ಸನ್ಮಾನ ಪಡೆಯುವವರನ್ನು ಕೂರಿಸುತ್ತಾರೆ. ಈ ಹೊಸ ಪದ್ಧತಿಯನ್ನು ನೋಡಿದಾಗ ಹಿಂದೆ ಕೆಲವರು ಸ್ವಾಮಿಗಳು ಕುಳಿತುಕೊಳ್ಳಲು ಅವರ ಶಿಷ್ಯರು ಪ್ರತ್ಯೇಕ ಕುರ್ಚಿಗಳನ್ನು ಹೊತ್ತು ತಂದಿಡುತ್ತಿದ್ದ ಕಾಲ ನೆನಪಾಗುತ್ತದೆ. ಅದನ್ನು ಟೀಕಿಸುತ್ತಿದ್ದವರು ಪ್ರಾಯಶಃ ಈಗ ಇದ್ದಂತಿಲ್ಲ ಅಥವಾ ಇದ್ದರೂ ಸ್ವತಃ ಸನ್ಮಾನಿತರಾಗಿ 'ಸನ್ಮಾನಪೀಠ'ದಲ್ಲಿ ಕಂಗೊಳಿಸುವುದರಿಂದ ಬಾಯಿಬಿಡುವಂತಿಲ್ಲ! ಹೊಸ ಪದ್ಧತಿಯ ಪ್ರಕಾರ ಸನ್ಮಾನ್ಯ ಗಣ್ಯವ್ಯಕ್ತಿಗಳು ಸನ್ಮಾನ್ಯರ ಹತ್ತಿರವೇ ಹೋಗಿ ಶಾಲು ಹೊದಿಸಿ ಸನ್ಮಾನಿಸುತ್ತಾರೆ. ಆರಂಭದಲ್ಲಿ ಸನ್ಮಾನ್ಯರಿಗೂ ಮತ್ತು

ಸನ್ಮಾನಿತರಿಗೂ ಇದ್ದ ಮುಜುಗರ ಇತ್ತೀಚೆಗೆ ಹೋಗಿ ಈಗ ಅದಕ್ಕೆ ಎಲ್ಲರೂ ಹೊಂದಿಕೊಂಡಿದ್ದಾರೆ. ಸನ್ಮಾನಿತರು ಕೆಲವೊಮ್ಮೆ ಪತ್ನೀಸಮೇತರಾಗಿ ಕುಳಿತಿದ್ದರೆ ಅವರು ಮದುವೆಮಂಟಪದಲ್ಲಿ ಕುಳಿತ ವಧೂವರರಂತೆ ಶೋಭಿಸುತ್ತಾರೆ. ಅವರ ಸುತ್ತಲೂ ಮುಖ್ಯಮಂತ್ರಿಗಳಾದಿಯಾಗಿ ಎಲ್ಲ ಅತಿಥಿಗಳು ಹಸನ್ಮುಖಿಗಳಾಗಿ ಬೀಗರಂತೆ ನಿಂತಿರುತ್ತಾರೆ. ನವವಧೂವರರಿಗೆ ಆಶೀರ್ವದಿಸುತ್ತಿರುವಂತೆ ಸ್ವಾಮಿಗಳೂ ಪೀಠಾಭಿಮಾನ ಬಿಟ್ಟು ನಿಂತಿರುತ್ತಾರೆ. ಸಭೆ ಕ್ಷಣಕಾಲ ಮದುವೆ ಮಂಟಪದಂತೆ ಕಂಗೊಳಿಸುತ್ತದೆ. "ಧನಂ ಧಾನ್ಯಂ ಪಶುಂ ಬಹುಪುತ್ರಲಾಭಂ...!" ಆಧುನಿಕ ಸಭೆ-ಸಮಾರಂಭಗಳಲ್ಲಿ ಎಲ್ಲೆಡೆ ಕಾಣುವ ಇನ್ನೊಂದು ಪ್ರಮುಖ ಬೆಳವಣಿಗೆ ಎಂದರೆ ಸಮಾರಂಭದ ಯಶಸ್ಸಿಗೆ ದುಡಿದ ಕಾರ್ಯಕರ್ತರನ್ನು ಶಾಲುಹೊದಿಸಿ, ಸ್ಮರಣಿಕೆಗಳನ್ನು ಕೊಟ್ಟು ಗೌರವಿಸುವುದು. ಎಷ್ಟೇ ಆಗಲಿ ಕೃತಜ್ಞತೆ ಎಂಬುದು ನಮ್ಮ ನಾಡಿನ ಹಿರಿದಾದ ಸಂಸ್ಕೃತಿಯಲ್ಲವೇ? ಆದರೆ ಕೆಲವೊಮ್ಮೆ ಈ ಗೌರವಾರ್ಪಣೆಯು ಅತಿಥಿಗಳು ಮತ್ತು ಸಭಿಕರು ರೋಸಿಹೋಗುವಷ್ಟು ಹನುಮಂತನ ಬಾಲದಂತೆ ಬೆಳೆಯುತ್ತಾ ಹೋಗುತ್ತದೆ.

ಸಭೆಯ ಆರಂಭದಿಂದ ಕೊನೆಯವರೆಗೆ 'ರಂಗಭೂಮಿ'ಯ ಮೇಲೆ ನಡೆಯುವ ಈ ಎಲ್ಲ ನಾಟಕೀಯ ದೃಶ್ಯಾವಳಿಗಳನ್ನು ನೋಡಿದ ನಮಗೆ ಸಕ್ಕರೆ ಖಾಯಿಲೆ ಇಲ್ಲದಿದ್ದರೂ ತಲೆಸುತ್ತು ಬಂದು ಲಂಡನ್‌ನಲ್ಲಿರುವ 'ಹೈಡ್ ಪಾರ್ಕ್' (Heide Park) ಎಂಬ ಹೆಸರಿನ ಉದ್ಯಾನವನ ನೆನಪಾಗುತ್ತದೆ. ಲಂಡನ್ನಿನ ಆ ಉದ್ಯಾನವನದಲ್ಲಿ ಒಂದು ವೇದಿಕೆ ಇದೆ. ಆ ವೇದಿಕೆಯನ್ನೇರಿ ಯಾರು ಎಷ್ಟು ಹೊತ್ತು ಬೇಕಾದರೂ ಭಾಷಣ ಮಾಡಬಹುದು. ಉದ್ಯಾನವನಕ್ಕೆ ವಿಹಾರಾರ್ಥ ಬಂದ ಜನರು ಗಿಡಮರಗಳ ಕೆಳಗೆ ಅಲ್ಲಲ್ಲಿ ಕುಳಿತು ಭಾಷಣ ಕೇಳುತ್ತಾರೆ. ಒಂದು ದಿನ ಸಂಜೆ ಎಲ್ಲರ ಭಾಷಣ ಮುಗಿದು ಕೊನೆಯಲ್ಲಿ ಒಬ್ಬ ಭಾಷಣ ಮಾಡುತ್ತಿದ್ದ. ಮತ್ತೊಬ್ಬ ಕೆಳಗೆ ಕುಳಿತು ಕೇಳುತ್ತಿದ್ದ. 'ನೀನೊಬ್ಬನಾದರೂ ಆಸಕ್ತಿಯಿಂದ ನನ್ನ ಭಾಷಣ ಕೇಳುತ್ತಿದ್ದೀಯಲ್ಲಾ' ಎಂದು ಭಾಷಣಕಾರ ತನ್ನ ಸಂತೋಷವನ್ನು ವ್ಯಕ್ತಪಡಿಸಿದ. ಅದಕ್ಕೆ ಆ ವ್ಯಕ್ತಿ: 'ನಿನ್ನ ಭಾಷಣವನ್ನು ಕೇಳಲು ನಾನಿಲ್ಲಿ ಕುಳಿತಿಲ್ಲ. ನಿನ್ನ ಭಾಷಣದ ನಂತರ ನನ್ನ ಭಾಷಣವಿದೆ. ಅದಕ್ಕಾಗಿ ಕಾಯುತ್ತಿದ್ದೇನೆ, ಬೇಗ ಮುಗಿಸು' ಎಂದು ಹೇಳಿದನಂತೆ. ನಮ್ಮ ದೇಶದಲ್ಲಿ ನಡೆಯುವ ಬಹುತೇಕ ಭಾಷಣಗಳು ಯಾವುದೋ ಮುಲಾಜಿಗಾಗಿ, ಯಾರನ್ನೋ ತೃಪ್ತಿಪಡಿಸಲೋಸುಗ ಹೇಳುವ ಏಕತಾನತೆಯ ಮಾತುಗಳಾಗಿರುತ್ತವೆ. 'ಕುರಿತೋದದೆಯುಂ ಭೀಕರ ಭಾಷಣಪ್ರಯೋಗಪರಿಣತಮತಿಗಳ' ಕೊರೆತದಿಂದ ಈ ನಾಡ ಜನರನ್ನು ರಕ್ಷಿಸುವ ಬಗೆ ಎಂತು?

11.2.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ